ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ

# ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ, ಕನ್ಯಾನ, ಹಟ್ಟಿಅಂಗಡಿ

ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

## ವಿಜ್ಞಾಪನೆ

ಪ್ರೀತಿಯ ಪಾಲಕರೇ/ಪೋಷಕರೇ,

ತಾವು ಮತ್ತು ತಮ್ಮ ಕುಟುಂಬ ವರ್ಗದವರು ಆರೋಗ್ಯವಾಗಿರುವಿರಿ ಎಂಬ ಸದಾಭಿಲಾಷೆ ನಮ್ಮದು. ವಿಶ್ವವನ್ನೇ ನಿಬ್ಬೆರಗುಗೊಳಿಸಿರುವ ಮಹಾಮಾರಿ ಕೊರೋನ ಎಲ್ಲಾ ರಂಗಗಳಂತೆ ಶಿಕ್ಷಣ ಕ್ಷೇತ್ರಕ್ಕೂ ಕರಿನೆರಳನ್ನು ಬೀರಿದೆ. ಇದರಿಂದಾಗಿ ಈಗಾಗಲೇ ಪ್ರಾರಂಭವಾಗಬೇಕಿದ್ದ ಈ ಶೈಕ್ಷಣಿಕ ವರ್ಷ ಇನ್ನೂ ಸ್ವಲ್ಪ ದಿನ ವಿಳಂಬವಾಗುವ ಸಾಧ್ಯತೆಯಿದೆ.

ಶಾಲೆಗಳೇ ಇಲ್ಲದ ಕಾಲದಲ್ಲಿ ಊರಲ್ಲೊಂದು ಸಂಸ್ಥೆ ಸ್ಥಾಪಿಸಿ ಶತಮಾನಕ್ಕೂ ಹೆಚ್ಚು ಕಾಲ ಶೈಕ್ಷಣಿಕ ಸೇವೆ ನೀಡುತ್ತಾ ಬಂದಿರುವ ಅದೆಷ್ಟೋ ಖಾಸಗೀ ಸಂಸ್ಥೆಗಳು ನಮ್ಮೊಡನಿದ್ದು ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾದ ಖಾಸಗಿಯವರ ಮಹತ್ತರ ಪಾತ್ರವನ್ನು ಯಾರೂ ಅಲ್ಲಗಳೆಯರು. ಈ ರಾಜ್ಯದಲ್ಲಿ ಅಂದಾಜು 50 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿರುವ ಖಾಸಗಿ ಶಾಲೆಗಳು ಸರಕಾರದ ಅನುದಾನವನ್ನು ಹಾಗೂ ಯಾವುದೇ ವಿನಾಯಿತಿಯನ್ನೂ ಪಡೆಯದೆ ಪೋಷಕರಿಂದ ಪಡೆವ ಬೋಧನಾ ಶುಲ್ಕವನ್ನು ಮಾತ್ರ ಅವಲಂಬಿಸಿ ಗುಣಮಟ್ಟದ ಶಿಕ್ಷಣ ನೀಡುತ್ತಿವೆ.

ಕೊರೋನ ಎಂಬ ಸಂಕಟ ನಿಯಂತ್ರಣಕ್ಕೆ ಸಿಗದೆ ಜನರನ್ನು ಅದರೊಂದಿಗೆ ಬದುಕಲು ಕಲಿಸುತ್ತಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಒಂದೊಂದು ಹೊಸ ಚಿಂತನೆಗೆ ಪ್ರಯತ್ನಿಸುತ್ತಿದ್ದೇವೆ. ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಶೈಕ್ಷಣಿಕ ತಂತ್ರಜ್ಞಾನದ ಬಳಕೆಯ ಬಗೆಗೆ ಆಸಕ್ತಿ ತೋರಿರುವುದು ಶಾಲೆಗಳ ಪ್ರಗತಿಗಾಮಿ ನಿಲುವನ್ನು ತೋರುತ್ತದೆ.

ನಮ್ಮ ಸಂಸ್ಥೆಯು ವಿದ್ಯಾರ್ಥಿಗಳು ಶೈಕ್ಷಣಿಕ ಆಸಕ್ತಿಯನ್ನು ಬೆಳೆಸಿಕೊಂಡು ಅಧ್ಯಯನದಲ್ಲಿ ನಿರತರಾಗಿರಲಿ ಎಂಬ ದೃಷ್ಟಿಯಿಂದ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಏಪ್ರಿಲ್ ತಿಂಗಳಿನಿಂದ ಹಾಗೂ 6 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಮೇ/ಜೂನ್ ತಿಂಗಳಿನಿಂದ ಪಾಠವನ್ನು ರೆಕಾರ್ಡ್ ಮಾಡಿ ಕಳುಹಿಸುವ ವ್ಯವಸ್ಥೆ ಮಾಡಿರುತ್ತೇವೆ. ಇದರಿಂದ ಮಕ್ಕಳ ಕಲಿಕೆ ಅಬಾಧಿತವಾಗಿ ಸಾಗಲಿ ಎಂಬ ಸದಾಭಿಲಾಷೆ ನಮ್ಮದು. ಮುಂದಿನ ದಿನಗಳಲ್ಲಿ ಎಲ್ಲಾ ಮಕ್ಕಳಿಗೆ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ತೊಡಗಿಸುವ ಯೋಜನೆಯನ್ನು ರೂಪಿಸುವ ವಿಚಾರ ಹೊಂದಿದ್ದೇವೆ. ಅಂತರ್ಜಾಲ ಆಧಾರಿತ ಕಲಿಕೆಗೆ ತಗಲುವ ಎಲ್ಲ ಖರ್ಚುಗಳನ್ನು ಶಾಲೆಯೇ ಭರಿಸುತ್ತಿದೆ. ಈ ಹೊಸ ಪಾಠ ಕ್ರಮಕ್ಕಾಗಿ ಹೆಚ್ಚಿನ ತರಬೇತಿ ಪಡೆಯುತ್ತಿರುವ ಶಿಕ್ಷಕರು ಮಕ್ಕಳಿಗೆ ಅರ್ಥವಾಗುವಂತೆ ಪಾಠ ಮಾಡಲು ಹಗಲಿರುಳು ಶ್ರಮಿಸುತ್ತಿದ್ದಾರೆ. ವಿದ್ಯಾರ್ಥಿಗಳು ಮತ್ತು ಪೋಷಕರು ನಮ್ಮೀ ಕಾರ್ಯಕ್ಕೆ ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ.

ಕೋವಿಡ್ ಕಾರಣಕ್ಕೆ ಅನಿರ್ದಿಷ್ಟಾವಧಿಯವರೆಗೆ ಮುಚ್ಚಿರುವ ಈ ಶಾಲೆಗಳು ಶಾಶ್ವತವಾಗಿ ನಿಂತು ಹೋಗದೆ ಕೋವಿಡ್ ನಂತರವೂ ನಮ್ಮ ಅಸಂಖ್ಯ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಲಭ್ಯವಾಗಬೇಕಾದರೆ ವಿದ್ಯಾರ್ಥಿಗಳಿಲ್ಲದೆ ಸ್ತಬ್ಧವಾಗಿರುವ ಈ ಸಮಯದಲ್ಲಿಯೂ ಅವುಗಳ ಸೂಕ್ತ ನಿರ್ವಹಣೆಯಾಗಬೇಕಾಗುತ್ತದೆ. ಬೋಧಕ ಬೋಧಕೇತರ ಸಿಬ್ಬಂದಿಗಳ ಸಂಬಳ, ತೆರಿಗೆ ಪಾವತಿ, ಕಟ್ಟಡದ ಬಾಡಿಗೆ, ವಾಹನಗಳ ವಿಮೆ, ವಿವಿಧ ಬಿಲ್ಲುಗಳನ್ನು, ಶಾಲಾ ಅಭಿವೃದ್ಧಿಗಾಗಿ ಮಾಡಿದ ಸಾಲ ಪಾವತಿ, ಇನ್ನಿತರ ನಿರ್ವಹಣೆಯ ಬಾಧ್ಯತೆಗಳು.. ಹೀಗೆ ಈ ಎಲ್ಲಾ ಖರ್ಚುವೆಚ್ಚಗಳನ್ನು ಆಡಳಿತ ಮಂಡಳಿ ಈಗಲೂ ಭರಿಸಬೇಕಾಗುತ್ತದೆ.

ಅನುದಾನ ರಹಿತ ಶಾಲೆಗಳ ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗಳಿಗೆ ಅಲ್ಲಿನ ವಿದ್ಯಾರ್ಥಿಗಳಿಂದ ಬರುವ ಶುಲ್ಕವೇ ಆದಾಯ. ಅದನ್ನು ಬಿಟ್ಟರೆ ಒಂದು ರೂಪಾಯಿ ಕೂಡಾ ಬೇರೆ ಆದಾಯ ಇಲ್ಲ ಎನ್ನುವುದು ಸ್ಪಟಿಕದಷ್ಟೇ ಸತ್ಯ. ಶಾಲೆ ಆರಂಭದ ದಿನಗಳಲ್ಲಿ ಒಂದು ಕಂತು ಶುಲ್ಕ ಪಾವತಿಸುವ ಬಹುತೇಕ ಪೋಷಕರು ಮತ್ತೆ ಮಾರ್ಚ್– ಏಪ್ರಿಲ್ ತಿಂಗಳು ಬಂದಾಗ ತಮ್ಮ ಮಕ್ಕಳ ಫಲಿತಾಂಶದ ಸಮಯದಲ್ಲಿ ಬಾಕಿ ಶುಲ್ಕವನ್ನು ಪಾವತಿಸುವುದು ಒಂದು ರೂಢಿ. ಅದೂ ಕೂಡಾ ಬಾಕಿ ಶುಲ್ಕ ಪಾವತಿಸುವ ಬಗ್ಗೆ ಪದೇ ಪದೇ ವಿಚಾರಿಸಿದ ಬಳಿಕವೇ ಒಂದಷ್ಟು ಶುಲ್ಕ ಬರುತ್ತದೆ. ಈ ಶುಲ್ಕದ ಪಾವತಿಯ ಆಧಾರದ ಮೇಲೆ ಶಾಲೆಗಳ ಎಲ್ಲಾ ಖರ್ಚು ವೆಚ್ಚಗಳು, ಶಿಕ್ಷಕ– ಸಿಬ್ಬಂದಿಗಳ ಸಂಬಳ ನಡೆಯುತ್ತವೆ.

ಪ್ರತಿ ವರ್ಷ ಶುಲ್ಕ ವಸೂಲಿಯಾಗುತ್ತಿದ್ದದ್ದೇ ಮಾರ್ಚ್ ತಿಂಗಳ ಅಂತ್ಯದಲ್ಲಿ ಮತ್ತು ಏಪ್ರಿಲ್ ತಿಂಗಳ ಆರಂಭದಲ್ಲಿ ಆದರೂ ಈ ವರ್ಷ ಏನಾಯಿತು ನಿಮಗೆಲ್ಲರಿಗೂ ಗೊತ್ತೇ ಇದೆ. ಶುಲ್ಕ ಇನ್ನೇನೂ ಸಂಗ್ರಹವಾಗಬಹುದು ಎನ್ನುವಷ್ಟರಲ್ಲಿ ಕೋವಿಡ್ ಕಾರಣಕ್ಕೆ ಲಾಕ್ ಡೌನ್ ಆಗಿ ಶಾಲೆ ಬಂದ್ ಆದದ್ದು ಇಂದಿಗೂ ತೆರೆದಿಲ್ಲ. ಈ ಬಾರಿ ಕೋವಿಡ್‌ನಿಂದಾಗಿ ಎಲ್ಲರೂ ತತ್ತರಿಸಿ

ಹೋಗಿದ್ದಾರೆ. ಶಾಲೆಗಳ ಶುಲ್ಕ ವರ್ಷಾಂತ್ಯದಲ್ಲಿ ಸಂಗ್ರಹವಾಗುವುದಾದರೂ ಕೂಡಾ ತನ್ನ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವೇತನ ನೀಡುತ್ತಿದ್ದೇವೆ. ನಮ್ಮ ಹಲವಾರು ಸಿಬ್ಬಂದಿ ವರ್ಗದವರು ನಮ್ಮ ಸಂಬಳವನ್ನು ನಂಬಿ ಸಂಸಾರ ನಡೆಸುತ್ತಿದ್ದಾರೆ, ನಮ್ಮ ಸಂಬಳವನ್ನು ನಂಬಿ ಸಾಲ ಮಾಡಿದ್ದಾರೆ, ನಮ್ಮ ಸಂಬಳವನ್ನು ನಂಬಿ ಕಂತಿನಲ್ಲಿ ವಾಹನ ಖರೀದಿಸಿದ್ದಾರೆ, ಅವರ ಮನೆಗೆ ಒಂದಷ್ಟು ದಿನಸಿ ಕೊಂಡು ಹೋಗುತ್ತಿದ್ದಾರೆ. ಈ ಪರಿಸ್ಥಿತಿ ಹೀಗೆ ಮುಂದುವರಿದರೆ ಇಲ್ಲಿ ದುಡಿಯುತ್ತಿರುವ ಎಲ್ಲಾ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ವರ್ಷ ಪೂರ್ತಿ ವೇತನವನ್ನು ಪಡೆಯಲು ಸಾಧ್ಯವಾಗದೆ ಅವರ ಬದುಕು ಅತಂತ್ರವಾಗುವ ಅಪಾಯ ಇಣುಕಿದ್ದು ಇದು ತುಂಬಾ ಬೇಸರದ ಸಂಗತಿ.

**ನಮ್ಮ ಘನ ಸರಕಾರ ಈ ಸಂದರ್ಭದಲ್ಲಿ ಶಾಲಾ ಶುಲ್ಕವನ್ನು ಪಾಲಕರಿಂದ ಪಡೆಯಲು ಅನುಮತಿ ನೀಡಿದೆ**. ಆದುದರಿಂದ ಮಾನ್ಯ ಪೋಷಕರಲ್ಲಿ ನಮ್ಮ ಕಳಕಳಿಯ ವಿನಂತಿ ಏನೆಂದರೆ ಕಳೆದ ಸಾಲಿನ ಶಾಲಾ ಶುಲ್ಕವನ್ನು ಪಾವತಿಸಲು ಬಾಕಿ ಇರುವವರು ದಯಮಾಡಿ ಪಾವತಿಸುವುದರ ಜೊತೆಗೆ ಈ ಶೈಕ್ಷಣಿಕ ವರ್ಷದ ಶಾಲಾ ಶುಲ್ಕನ್ನು ಪಾವತಿಸಿ ನಮ್ಮ ಸಿಬ್ಬಂದಿ ವರ್ಗದವರು ವೇತನ ಮತ್ತು ಇತರೆ ಖರ್ಚುವೆಚ್ಚಗಳನ್ನು ಭರಿಸಲು ಸಹಕರಿಸಬೇಕೆಂದು ಮನವಿ ಮಾಡುತ್ತಿದ್ದೇವೆ.

ಸುಮಾರು 1600ಕ್ಕೂ ಅಧಿಕ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿರುವ ಈ ಸಂಸ್ಥೆಯು ಎಲ್ಲಾ ಕ್ಷೇತ್ರದಲ್ಲೂ ಸರ್ವತೋಮುಖ ಏಳಿಗೆಯನ್ನು ಹೊಂದಿ ರಾಜ್ಯ ರಾಷ್ಟ್ರಮಟ್ಟದಲ್ಲಿ ಕೀರ್ತಿಪತಾಕೆ ಹಾರಿಸಿ ಗುರುತಿಸಿಕೊಳ್ಳುವಲ್ಲಿ ಎಲ್ಲಾ ಪಾಲಕ ಪೋಷಕರ ಕಾಣಿಕೆ ಅಪರಿಮಿತವಾದದ್ದು. ಪಾಲಕರ ಈ ರೀತಿಯ ಸಹಾಯ ಸಹಕಾರವನ್ನು ಮುಂದಿನ ದಿನಗಳಲ್ಲೂ ಅಪೇಕ್ಷಿಸುತ್ತೇವೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಶಾಲೆ ಅಭಿವೃದ್ಧಿ ಪಥದಲ್ಲಿ ಸಾಗಿರುವಾಗ ಇದರಲ್ಲಿ ಶಾಲಾ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರ ಕೊಡುಗೆ ಸಹ ಗಮನಾರ್ಹ. ಸುಮಾರು 189 ಸಿಬ್ಬಂದಿಗಳು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಸುದೀರ್ಘ ರಜಾ ಅವಧಿಯಲ್ಲಿ ಅವರ ಹಿತರಕ್ಷಣೆಯನ್ನು ಕಾಪಾಡುವುದು ಸಹ ಸಂಸ್ಥೆಯ ಕರ್ತವ್ಯವಾಗಿರುತ್ತದೆ. ಇವರೆಲ್ಲರಿಗೆ ವೇತನ ಮತ್ತು ಶಾಲೆಯ ನಿತ್ಯದ ಖರ್ಚು ವೆಚ್ಚಗಳನ್ನು ಭರಿಸುವ ಜವಾಬ್ದಾರಿ ಸಂಸ್ಥೆಗಿದೆ.

ಈ ನೆಲೆಯಲ್ಲಿ ತಮ್ಮಿಂದ ಬಾಕಿ ಉಳಿದಿರುವ ಕಳೆದ ಸಾಲಿನ ಶಾಲಾ ಶುಲ್ಕವನ್ನು (ಬಾಕಿ ಇದ್ದವರು) ಆದಷ್ಟು ಬೇಗ ಪಾವತಿಸಲು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇವೆ. ಇದರ ಜೊತೆಗೆ ಈ ಶೈಕ್ಷಣಿಕ ವರ್ಷದ ಶಾಲಾ ಶುಲ್ಕವನ್ನು ಪಾಲಕರು ಪಾವತಿಸಿ ಸಹಕರಿಸುವರೇ ಎಂಬ ಅಭಿಲಾಷೆ ನಮ್ಮದಾಗಿದೆ.

ಹಾಗೆಯೇ ಹೊಸದಾಗಿ ಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳು ನಿಮ್ಮ ಮನೆಯಲ್ಲಿ ಅಥವಾ ನಿಮಗೆ ಪರಿಚಯವಿರುವ ಮನೆಯಲ್ಲಿ ಇದ್ದರೆ ಅವರಿಗೂ ಶಾಲೆಯ ಕಚೇರಿಯನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ನೋಂದಣಿ ಮಾಡುವಂತೆ ತಿಳಿಸಿ.

ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ನವ ವಿಧದ ಆಸಕ್ತಿ, ಅಭಿರುಚಿಗಳಿಂದ ಸೃಜನಶೀಲತೆಗೆ ಮೆರಗು ಸಿಗುವಂತಾಗಬೇಕು. ಅವರಲ್ಲಿ ಭಾವನಾತ್ಮಕ ಸಾಮಾಜಿಕ ಸಂಬಂಧಗಳ ಮೌಲ್ಯವನ್ನು ಅರ್ಥ ಮಾಡಿಸುವಂತಹ ಸಂಸ್ಕಾರ-ಸಂಸ್ಕೃತಿಯನ್ನು ಶಿಕ್ಷಣದ ಜೊತೆ ಜೊತೆಗೆ ಮೈಗೂಡಿಸಿಕೊಳ್ಳುವಂತೆ ಮಾಡುವ ಜವಾಬ್ದಾರಿ ಶಾಲೆಯ ಮತ್ತು ಪಾಲಕರದ್ದಾಗಿದೆ.

ತಮ್ಮ ಮಕ್ಕಳು ವಿದ್ಯಾರ್ಜನೆ ಮಾಡುತ್ತಿರುವ ಈ ಸಂಸ್ಥೆಯನ್ನು ತಮ್ಮದೆಂದು ಭಾವಿಸಿ, ತಮ್ಮ ಮಕ್ಕಳಿಗೆ ಧನಾತ್ಮಕ ಶಿಕ್ಷಣ ಸಿಗುವಲ್ಲಿ ತಮ್ಮೆಲ್ಲರ ಸಹಕಾರವನ್ನು ಈ ಮೂಲಕ ಕೇಳಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ

ಅಧ್ಯಕ್ಷರು ಮತ್ತು ಸದಸ್ಯರು
ಆಡಳಿತ ಮಂಡಳಿ

ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ
ವಸತಿ ಶಾಲೆ